Tumbe Group of International Journal
A Peer Reviewed Multidisciplinary Journal
ISSN: 2581-8511
Volume- 4
Issue-3
Sept-December: 2021

# ಸಾಹಿತ್ಯ ಮತ್ತು ಗ್ರಹಿಕೆ

**ಸೈಯದ್ ಬಿ.**
ಪಿಎಚ್.ಡಿ ಸಂಶೋಧಕ
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-೫೮೩೨೭೬
ಮೊ – ೯೮೮೦೦೫೧೯೯೮, Gmail: syducta@gmail.com

## ಪ್ರಸ್ತಾವನೆ.

ಸಾಮಾನ್ಯವಾಗಿ ಗ್ರಹಿಕೆ ಎಂಬುದನ್ನು ನೋಡುವ ಕ್ರಮ, ತಿಳುವಳಿಕೆ ; ಅಭಿಪ್ರಾಯ, ಪರಸ್ಪರ ಗ್ರಹಿಕೆ, ಅರಿವು, ಮೌಲ್ಯಮಾಪನ ಹಾಗೂ ಕೆಲವು ವಿದ್ಯಮಾನದ ಅವಿಭಾಜ್ಯ ಚಿತ್ರದ ಮನಸ್ಸಿನಲ್ಲಿನ ರಚನೆ ಎಂಬರ್ಥಗಳಲ್ಲಿ ಬಳಸುತ್ತೇವೆ. ಆದರೆ ಆದರ ಅರ್ಥ ಇನ್ನೂ ವಿಶಾಲವಾಗಿದೆ. ಇದೊಂದು ವಿದ್ಯಮಾನದ ವಾಸ್ತವತೆ ಮತ್ತು ಸನ್ನಿವೇಶಗಳ ಪ್ರತಿಬಿಂಬವಾಗಿದೆ. ಹಾಗೆ ಅರಿವಿನ ಕಾರ್ಯವಾಗಿದ್ದು ವ್ಯಕ್ತಿಯ ಗ್ರಹಿಕೆಯ ವಿಚಾರವನ್ನು ವಿಶಾಲಗೊಳಿಸುತ್ತದೆ. ತತ್ವಶಾಸ್ತ್ರದಲ್ಲಿನ ಗ್ರಹಿಕೆ ಸಂವೇದನಾ ತಿಳುವಳಿಕೆ, ಇಂದ್ರಿಯಗಳ ಮೂಲಕ ಪ್ರಜ್ಞೆಯಲ್ಲಿರುವ ವಸ್ತುಗಳ ಪ್ರತಿಬಿಂಬ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಸಾಮಾಜಿಕ ಗ್ರಹಿಕೆ ಎಂದರೆ ಮನುಷ್ಯ ಮತ್ತು ಸಾಮಾಜಿಕ ಗುಂಪುಗಳ ಸಾಮಾಜಿಕ ವಸ್ತುಗಳ ಗ್ರಹಿಕೆ, ತಿಳುವಳಿಕೆ ಮತ್ತು ಮೌಲ್ಯಮಾಪನ ಎಂದು ನಾವು ಕಂಡುಕೊಂಡಿದ್ದೇವೆ. ಸಾಮಾಜಿಕ ಗ್ರಹಿಕೆ ಎಂಬ ಪದವನ್ನು ಅಮೆರಿಕದ ಮನಶಾಸ್ತ್ರಜ್ಞ ಜೆ. ಬ್ರೂನರ್ ಅವರು ಪರಿಚಯಿಸಿದ್ದಾರೆ.

**ಕೀಲಿ ಪದಗಳು** : ಸಾಹಿತ್ಯ ಮತ್ತು ಗ್ರಹಿಕೆ, ಸಾಹಿತ್ಯ ಗ್ರಹಿಕೆ, ಸೈಯದ್ ಬಿ ಕಬ್ಬಿಗೆರೆ, ಸಂವೇದನೆ, ಗ್ರಹಿಕೆ,

## ಪೀಠಿಕೆ.

ಗ್ರಹಿಕೆ ಇಂದ್ರಿಯಗಳಿಂದ ನೋಡುವ ಪ್ರಕ್ರಿಯೆಯಿಂದ ಆರಂಭಗೊಂಡು ವಿವಿಧ ಸಂವೇದನೆಗಳ ಮೂಲಕ ಹೊರಹೊಮ್ಮುತ್ತದೆ. ಎಲ್ಲ ಸಂಶೋಧನೆಗಳಲ್ಲಿಯೂ ಗ್ರಹಿಕೆ ಬಹುಮುಖ್ಯವಾದದ್ದು ಅದರಲ್ಲೂ ಮಾನಸಿಕ ಸಂಶೋಧನೆಯಲ್ಲಿ ಗ್ರಹಿಕೆ ಜನಪ್ರಿಯ ವಿಷಯವಾಗಿದೆ. ಪ್ರಸಿದ್ಧ ಮನಶ್ಶಾಸ್ತ್ರಜ್ಞ ಎನ್.ಎನ್. ಲ್ಯಾಂಗ್ ಅವರಿಗೆ ಗ್ರಹಿಕೆಯ ವಿಶೇಷ ನಿಯಮವನ್ನು ಅಭಿವೃದ್ಧಿಪಡಿಸಿದ ಕೀರ್ತಿ ಸಲ್ಲುತ್ತದೆ. ಮಾನವರು ಪರಸ್ಪರರ ಗುಣಲಕ್ಷಣಗಳು ಮತ್ತು ಭಾವನೆಗಳನ್ನು ಎಷ್ಟರ ಮಟ್ಟಿಗೆ ಪ್ರತಿಬಿಂಬಿಸುತ್ತಾರೆ. ಇತರರನ್ನು ಗ್ರಹಿಸುತ್ತಾರೆ ಮತ್ತು ಅರ್ಥ ಮಾಡಿಕೊಳ್ಳುತ್ತಾರೆಂಬುದರ ಮೇಲೆ ಗ್ರಹಿಕೆಯ ವಿಷಯ ನಿರ್ಣಾಯವಾಗುತ್ತದೆ. ಆದ್ದರಿಂದ 'ಗ್ರಹಿಕೆ' ಮಾನಸಿಕ ಭಾವನೆಗಳೊಂದಿಗೆ ನಿಕಟತೆ ಸಂಬಂಧ ಹೊಂದಿದೆ. ಗ್ರಹಿಕೆ ಎನ್ನುವುದು ಮಾನಸಿಕ ಪರಿಕಲ್ಪನೆ ಮತ್ತು ಸೈದ್ಧಾಂತಿಕ ಪರಿಕಲ್ಪನೆಯಾಗಿದ್ದು, ಒಬ್ಬ ವ್ಯಕ್ತಿಯ ಪ್ರಪಂಚದ ಅರಿವಿನ ಮತ್ತು ವ್ಯಕ್ತಿನಿಷ್ಠ ಗ್ರಹಿಕೆಯ ಅವಿಭಾಜ್ಯ ಪ್ರಕ್ರಿಯೆಯ ತುಣುಕನ್ನು ನಿರೂಪಿಸುತ್ತದೆ. ಒಬ್ಬ ವ್ಯಕ್ತಿಯ ಮಾನಸಿಕ ಭಾವನೆಗಳ ಸಂವೇದನೆಗಳನ್ನು ಶೋಧಿಸುವ ಮೂಲಕ ಆರಂಭವಾಗುವ ಗ್ರಹಿಕೆ ಇಡೀ ಸಮಾಜದ ಸಾಮಾಜಿಕ ಸಂವೇದನೆಯನ್ನು ಗ್ರಹಿಸುವಾಗ ಸಾಮಾಜಿಕ ಗ್ರಹಿಕೆಯಾಗಿ ಬದಲಾಗುತ್ತದೆ.

ಈ ಸಾಮಾಜಿಕ ಗ್ರಹಿಕೆ ಒಂದು ವಿಶಾಲವಾದ ಬಹು-ಘಟಕಗಳನ್ನು ಪ್ರತಿನಿಧಿಸುವ ಪರಿಕಲ್ಪನೆಯಾಗಿದೆ. ಆ ಘಟಕಗಳ ಕೇಂದ್ರಬಿಂದು ಮನುಷ್ಯ ಮತ್ತು ಆತ ನಿರ್ಮಿಸಿಕೊಂಡಿರುವ ಸಮಾಜವಾಗಿದೆ. ಆದ್ದರಿಂದ ಸಾಮಾಜಿಕ

ಗ್ರಹಿಕೆಯಲ್ಲಿ ಮನುಷ್ಯ ಪರಸ್ಪರ ಸಂವಹನಕ್ಕೆ ಒಳಗಾಗುತ್ತಾನೆ, ಪಾಲ್ಗೊಳ್ಳುತ್ತಾನೆ, ತಿಳಿದುಕೊಳ್ಳುತ್ತಾನೆ ಹಾಗೂ ಅರ್ಥಮಾಡಿಕೊಳ್ಳುತ್ತಾನೆ. ಆದ್ದರಿಂದ ಇದು ಜನರೊಂದಿಗಿನ ಪರಸ್ಪರ ಕ್ರಿಯೆಯಲ್ಲಿ ಉದ್ಭವಿಸುವ ಒಂದು ಪ್ರಕ್ರಿಯೆಯಾಗಿದೆ. ಗ್ರಹಿಕೆ "ಸಾಮಾಜಿಕ ಕಂಡೀಷನಿಂಗ್, ವಸ್ತುವಿನ ಗುಣಲಕ್ಷಣಗಳ ಮೇಲೆ ಮಾತ್ರವಲ್ಲ, ವಿಷಯದ ಹಿಂದಿನ ಅನುಭವ, ಅವರ ಗುರಿಗಳು, ಉದ್ದೇಶಗಳು ಮತ್ತು ಅದರ ಮಹತ್ವವನ್ನು ಸಹ ಅವಲಂಬಿಸಿದೆ."[೧] ಎಂಬುದು ಗ್ರಹಿಕೆ ಎಂಬ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವಲ್ಲಿ ಮುಖ್ಯವಾಗುತ್ತದೆ. ವ್ಯಕ್ತಿ ಸಮಾಜ ಮತ್ತು ತನ್ನ ಸುತ್ತಲಿನ ಸಾಂಸ್ಕೃತಿಕ ಘಟನೆ, ಸನ್ನಿವೇಶಗಳನ್ನು ಗ್ರಹಿಸುವಾಗ ತಾನು ನೋಡಿದ, ಅನುಭವಿಸಿದ್ದ ಹಿಂದಿನ ಅನುಭವಗಳ ನೆರವು ಹೋಗುವುದಕ್ಕಿದು ಉತ್ತಮ ನಿದರ್ಶನವಾಗಿದೆ. ಹಾಗೆ ಆತ ಗ್ರಹಿಸಲು ಹೊರಡುವ ವಿಷಯದ ಹಿಂದೆ ತಾನು ಹೊಂದಿದ ಉದ್ದೇಶ, ಗುರಿಕೂಡ ತನ್ನ ಗ್ರಹಿಕೆ ವಿಷಯದ ಮಹತ್ವವನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಅದ್ದರಿಂದಲೇ ನಾವು ಒಂದು ವಿಷಯವನ್ನು ಗ್ರಹಿಸಲು ಹೊರಟಾಗ ಆ ವಿಷಯದ ಬಗ್ಗೆ ನಮಗೆ ಮುಂಚಿತವಾಗಿಯೇ ಅಲ್ಪಸಲ್ಪ ಮಾಹಿತಿಯಿದ್ದಾಗ, ಗ್ರಹಿಸಲು ಹೊರಟ ವಿಷಯ ಹೆಚ್ಚು ಪರಿಣಾಮಕಾರಿಯಾಗಿ ಅರ್ಥವಾಗುತ್ತದೆ. ಸಾಮಾಜಿಕ ಗ್ರಹಿಕೆ ಸಾಮಾಜಿಕ ಮನೋವಿಜ್ಞಾನದಲ್ಲಿ ಅತ್ಯಂತ ಸಂಕೀರ್ಣ ಮತ್ತು ಪ್ರಮುಖ ಪರಿಕಲ್ಪನೆಗಳಲ್ಲಿ ಒಂದಾಗಿದೆ. ಇದು ಆಧುನಿಕ ಮತ್ತು ಮುಂದಿನ ಮಾನವ ಮನೋವಿಜ್ಞಾನಕ್ಕೆ ಸಾಮಾಜಿಕ ಮನೋವಿಜ್ಞಾನದ ಮಹತ್ವದ ಕೊಡುಗೆಗಳಲ್ಲಿ ಒಂದಾಗಿದೆಂದು ಅಭಿಪ್ರಾಯಿಸಬಹುದು.

ಗ್ರಹಿಕೆಗೆ ಸಾಮಾಜಿಕ ಸಂವೇದನೆಗಳಿಲ್ಲದೆ ಅಸ್ತಿತ್ವವಿಲ್ಲ. ಸಾಮಾಜಿಕ ಗ್ರಹಿಕೆಗೆ ಮೂಲ ಸಾಮಾಜಿಕ ಸಂವೇದನೆಯೇ ಆಗಿರುತ್ತದೆ. ಆದ್ದರಿಂದ ಪ್ರತಿಯೊಂದು ಗ್ರಹಿಕೆಗೂ ಒಂದೊಂದು ಸಂವೇದನೆ ನೆಲೆ ಅತ್ಯಗತ್ಯ. ಮನುಷ್ಯ ಸಾಮಾಜಿಕ ಜೀವಿ, ಸಂಘ ಜೀವಿ ಆದ್ದರಿಂದ ತನ್ನ ಜೀವಿತಾವಧಿಯಲ್ಲಿ ಅನೇಕರನ್ನು ಅಪಾರ ಸಂಖ್ಯೆಯಲ್ಲಿ ಸಂಪರ್ಕಿಸಿ, ವಿವಿಧ ರೀತಿಯ ಪರಸ್ಪರ ಸಂಬಂಧಗಳನ್ನು, ಸಂವೇದನೆಯನ್ನು ರೂಪಿಸುತ್ತಾನೆ. ಮನುಷ್ಯನ ವೈಯಕ್ತಿಕ ಗುಂಪುಗಳು ಸಹ ನಿಕಟ ಸಬಂಧಗಳನ್ನು ರೂಪಿಸುತ್ತವೆ. ಹಾಗಾಗಿ ಪ್ರತಿಯೊಬ್ಬ ಮನುಷ್ಯ, ಲಿಂಗ, ಪ್ರದೇಶ, ಭಾಷೆ, ಸಂಸ್ಕೃತಿ ವಿಭಿನ್ನ ಸಂವೇದನೆಯನ್ನು ಹೊಂದಿರುತ್ತದೆ.

ಉದಾಹರಣೆಗೆ ಸ್ತ್ರೀಬಗ್ಗೆ ತಿಳಿಯಲು ಸ್ತ್ರೀಯರ ಮಾನಸಿಕ ಪರಿಸರದ ಸಂವೇದನೆಯ ಗ್ರಹಿಕೆ. ದಲಿತನ ಬಗ್ಗೆ ತಿಳಿಯಲು ಆತನ ಬದುಕಿನ ವಾಸ್ತವತೆ ಅರಿಯಲು ದಲಿತ ಸಂವೇದನೆಯ ಗ್ರಹಿಕೆ. ಹಾಗೆ ಒಂದು ಸಮುದಾಯ, ಬುಡಕಟ್ಟಿನ ಬಗ್ಗೆ ಅಧ್ಯಯನ ಮಾಡುವಾಗ ಅವುಗಳ ಸಂವೇದನೆಯ ಗ್ರಹಿಕೆ ಹಾಗೂ ಒಂದು ದೇಶದ ಸಂಸ್ಕೃತಿ, ಭಾಷೆಯ ಬಗ್ಗೆ ಅರಿಯಲು ಅಲ್ಲಿನ ಸಾಂಸ್ಕೃತಿಕ ಸಂವೇದನೆ ಗ್ರಹಿಕೆ ಅತ್ಯಗತ್ಯವಾಗುತ್ತದೆ. ಹೀಗೆ ಇನ್ನೂ ಅನೇಕ ಸಾಮಾಜಿಕ ಸಂವೇದನೆಯ ನೆಲೆಗಳು ಅಧ್ಯಯನ ಮಾಡುತ್ತ ಒದಷ್ಟು ವಿಶಾಲಗೊಳ್ಳುತ್ತವೆ.

ಗ್ರಹಿಕೆ ಎಂಬುದು ಕೇವಲ ಮನುಷ್ಯ, ಸಮುದಾಯಕ್ಕೆ ಮಾತ್ರ ಸಂಬಂಧಿಸಿಲ್ಲ. ಈಗ ಭಾರತದ ಒಬ್ಬ ವ್ಯಕ್ತಿ ದಕ್ಷಿಣ ಆಫ್ರಿಕಾದ ಬಗ್ಗೆ ಬರೆಯಲು ಅಥವ ಅಧ್ಯಯನ ಮಾಡುವ ಪೂರ್ವದಲ್ಲೇ ಆ ದೇಶದ ಭೌಗೋಳಿಕ ಪರಿಸರದ ಬಗ್ಗೆ ಗ್ರಹಿಸಿಕೊಂಡಂತೆ. ಅಲ್ಲಿನ ಜನರ ಸಾಮಾಜಿಕ ಸಂವೇದನೆಗಳನ್ನು ಕೂಡ ಗ್ರಹಿಸುವುದು ಮುಖ್ಯವಾಗುತ್ತದೆ. ಇಲ್ಲದಿದ್ದರೆ ಅಲ್ಲಿನ ಮನುಷ್ಯರಲ್ಲಿನ ವಿಭಿನ್ನ ಸಾಮಾಜಿಕ ಸಂವೇದನೆಯ ಗ್ರಹಿಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಬರೆಯಲು, ಅಧ್ಯಯನ ಮಾಡಲು ಮುಂದಾಗುವ ವ್ಯಕ್ತಿ ತಾನು ಆಯ್ಕೆ ಮಾಡಿಕೊಂಡ ಪ್ರದೇಶ, ಲಿಂಗ, ಸಮುದಾಯ, ಭಾಷೆ ಹಾಗೂ ಸಂಸ್ಕೃತಿ ಮುಂತಾದ ಸಾಂಸ್ಕೃತಿಕ ಸಂವೇದನೆಗಳನ್ನು ಗ್ರಹಿಸಿಕೊಳ್ಳಬೇಕಾಗುತ್ತದೆ. ಇವುಗಳ ಮಧ್ಯೆ ಅನೇಕ ವೈಯಕ್ತಿಕ ವ್ಯತ್ಯಾಸಗಳಿವೆ. ಹಾಗಾಗಿ ಗ್ರಹಿಕೆಯಲ್ಲೂ ಕೂಡ ವ್ಯತ್ಯಾಸಗಳಿರಬೇಕಾಗುತ್ತದೆ.

ಉದಾಹರಣೆಗೆ ಸಾಮಾಜಿಕ ಸಂವೇದನೆಯಲ್ಲಿನ ಸ್ತ್ರೀಸಂವೇದನೆ ಬಗ್ಗೆ ಕಥೆ, ಕಾದಂಬರಿಯಂತಹ ಸಾಹಿತ್ಯವನ್ನು ಅಧ್ಯಯನ ಮಾಡುವವರು ಸ್ತ್ರೀಯರೇ ಆಗಿರಬೇಕೆಂದಿಲ್ಲ. ಅದು ಪುರುಷನಿಂದಲೂ ಸಾಧ್ಯವಿದೆ. ಆದರೆ ಆತನಲ್ಲಿ ಸ್ತ್ರೀ ಸಂವೇದನೆಯ ಒಳ ಸೂಕ್ಷ್ಮತೆಗಳನ್ನು ಗ್ರಹಿಸುವಂತಹ ಪ್ರಬುದ್ಧತೆ, ಅವಲೋಕನ ಮಾಡುವ ದೃಷ್ಟಿಕೋನ ಮುಖ್ಯವಾಗುತ್ತದೆ. ಈ ಪ್ರಬುದ್ಧತೆ, ಅವಲೋಕನ ಹಾಗೂ ದೃಷ್ಟಿಕೋನದ ಗ್ರಹಿಕೆಗಳು ಅಧ್ಯಯನಕಾರ/ವ್ಯಕ್ತಿ ಸಮಾಜದಲ್ಲಿ ಎಲ್ಲರೊಂದಿಗೆ ಮಾನಸಿಕವಾಗಿ ಹೇಗೆ ಬೇರೆತಿದ್ದಾನೆ. ಹಾಗೆ ಸಮಾಜವನ್ನು ಹೇಗೆ ಗ್ರಹಿಸಿಕೊಂಡಿದ್ದಾನೆ. ಹಾಗೂ ತಾನು ಆಯ್ಕೆ ಮಾಡಿಕೊಂಡ ಕ್ಷೇತ್ರದ ಬಗ್ಗೆ ಎಷ್ಟು ಜ್ಞಾನವನ್ನು ಸಂಪಾದಿಸಿದ್ದಾನೆಂಬುದರ ಮೇಲೆ ನಿರ್ಧಾರವಾಗುತ್ತದೆ. ಆದ್ದರಿಂದ ಗ್ರಹಿಕೆ ಎನ್ನುವುದನ್ನು ಒಬ್ಬ ವ್ಯಕ್ತಿ ಮತ್ತು ಅವನು ಗ್ರಹಿಸುವ ವ್ಯಕ್ತಿ, ಸಮಾಜದ ನಡುವಿನ ಮಾನಸಿಕ ಮತ್ತು ಜ್ಞಾನ ಸಂವಹನಗಳ ನಡುವಿನ ಸಂಬಂಧವೆನ್ನಬಹುದು. ಹಾಗೆ ಗ್ರಹಿಕೆ ಎಂಬುದು ಯಾವುದೋ ಒಂದು ಲಿಂಗಕ್ಕೆ ಮಾತ್ರ ಸಂಬಂಧಿಸಿದಲ್ಲ ಅದು ಜ್ಞಾನ, ಅನುಭವ ಹಾಗೂ ಮಾನಸಿಕತೆಗೆ ಸಂಬಂಧಿಸಿದ್ದೆಂದು ಸ್ಪಷ್ಟವಾಗಿ ಹೇಳಬಹುದಾಗಿದೆ.

ಸಾಹಿತ್ಯ ಮತ್ತು ಗ್ರಹಿಕೆಯನ್ನು ಎರಡು ಬಗೆಯಲ್ಲಿ ನೋಡಬಹುದು.

ಒಂದು : ಸಾಹಿತಿ ಸಮಾಜವನ್ನು ಗ್ರಹಿಸಿದ ಬಗೆ.

ಎರಡು : ಸಾಹಿತ್ಯ ಕೃತಿಗಳ ಮೂಲಕ ಸಮಾಜ ಗ್ರಹಿಸುವ ಬಗೆ.

'ಸಾಹಿತಿ ಸಮಾಜವನ್ನು ಗ್ರಹಿಸಿದ ಬಗೆ' . ಪ್ರಾಚೀನದಿಂದ ಇಂದಿನವರೆಗಿನ ಅನೇಕ ಸಾಹಿತಿಗಳು ತಮ್ಮ ಸಾಹಿತ್ಯ ಕೃತಿಗಳ ಮೂಲಕ ತನ್ನ ಕಾಲಘಟ್ಟದ ಸಮಾಜವನ್ನು ಗ್ರಹಿಸಿದ್ದಾರೆ. ಆ ಮೂಲಕ ಅಂದಿನ ಸಮಾಜದಲ್ಲಿನ ಪರಂಪರೆ, ಸಂಪ್ರದಾಯ, ಆಧುನಿಕತೆ, ಸಂಘರ್ಷ, ಸಾಮರಸ್ಯ, ಸಾಂಸ್ಕೃತಿಕ ಸಂದರ್ಭ ಹಾಗೂ ಸಂಕೀರ್ಣತೆಗಳು ಮತ್ತು ಪರಿಣಾಮಗಳಂತಹ ವಿಚಾರಗಳನ್ನು ಹಿಡಿದಿಟ್ಟಿದ್ದಾರೆ. ಇದಕ್ಕೆ ರಾಮಾಯಣ, ಮಹಾಭಾರತ, ಕವಿರಾಜಮಾರ್ಗ, ಪಂಪಭಾರತ, ವಚನ ಸಾಹಿತ್ಯ, ಕೀರ್ತನೆ, ತತ್ವಪದ ಸಾಹಿತ್ಯದಿಂದ ಹಿಡಿದು ಆಧುನಿಕ ಕಾಲದ ಅನೇಕ ಕಾವ್ಯ, ಕಾದಂಬರಿ, ಕತೆ, ನಾಟಕ ಮುಂತಾದ ಕೃತಿಗಳೆಲ್ಲವೂ ರಚನೆಗೊಂಡ ಅವುಗಳ ಕಾಲಘಟ್ಟದ ಸಮಾಜವನ್ನು ಗ್ರಹಿಸಿರುವುದನ್ನು ಕಾಣಬಹುದಾಗಿದೆ. ಹೀಗೆ ಸಾಹಿತಿ ತನ್ನ ಜೀವಿತಾವಧಿ ಕಾಲವನ್ನು ಗ್ರಹಿಸಿ ಸಾಹಿತ್ಯದಲ್ಲಿ ಕಟ್ಟಿಕೊಡುವುದು ಕೂಡ ಆತನ ಕರ್ತವ್ಯ ಮತ್ತು ಜವಾಬ್ದಾರಿಗಳಲ್ಲಿ ಒಂದೆನ್ನಬಹುದು. ಹಾಗಾಗಿ ಒಂದು ಕಾಲಘಟ್ಟದ ವಾಸ್ತವತೆಯ ಮೇಲೆ ಸಾಹಿತಿ ಬೆಳಕು ಚೆಲ್ಲುತ್ತಾನೆ. ಆದ್ದರಿಂದಲೇ ಸಾಹಿತ್ಯವನ್ನು ಭೂತ ಮತ್ತು ವರ್ತಮಾನಕ್ಕೆ ಮುಖಾಮುಖಿ ಮಾಡುವ ಮೂಲಕ ಸಮಕಾಲೀನ ದೃಷ್ಟಿಕೋನದಲ್ಲಿ ಅನೇಕ ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಒಟ್ಟಿನಲ್ಲಿ ಸಾಹಿತ್ಯದ ಮೂಲಕ ಸಮಾಜವನ್ನು ಗ್ರಹಿಸುವಲ್ಲಿ ಸಾಹಿತಿ ಪಾತ್ರ ತುಂಬ ಮುಖ್ಯವಾಗುತ್ತದೆಂದು ಅಭಿಪ್ರಾಯಿಸಬಹುದು.

ಇನ್ನೊಂದು 'ಸಾಹಿತ್ಯ ಕೃತಿಗಳ ಮೂಲಕ ಸಮಾಜವನ್ನು ಗ್ರಹಿಸುವ ಬಗೆ' . ಇದರಲ್ಲಿ ಕೃತಿ ಸಮಾಜಕ್ಕೆ ಏನು ಸಂದೇಶ ನೀಡುತ್ತಿದೆಂಬುದು ಮುಖ್ಯವಾಗುತ್ತದೆ. ನಮ್ಮ ಕನ್ನಡ ಸಾಹಿತ್ಯದ ಪ್ರಾಚೀನ ಕೃತಿಯಿಂದ ಹಿಡಿದು ಆಧುನಿಕ ಸಾಹಿತ್ಯದವರೆಗಿನ ಅನೇಕ ಕೃತಿಗಳು ಸಾಮಾಜಿಕ ಸಂವೇದನೆಯನ್ನು ಅಭಿವ್ಯಕ್ತಿಸುತ್ತವೆ. ಇಂದಿಗೂ ನಮ್ಮ ಸಮಾಜದ ಓರೆಕೋರೆಗಳನ್ನು ತಿದ್ದುವ ಕೆಲಸ ಮಾಡುತ್ತವೆ. ಆಧುನಿಕ ಕನ್ನಡ ಸಾಹಿತ್ಯವು ಸಮಾಜವನ್ನು ಗ್ರಹಿಸಿದ ಬಗೆ ಪ್ರಾಚೀನ ಸಾಹಿತ್ಯಕ್ಕಿಂತ ಭಿನ್ನವಾಗಿದೆ. ಸ್ತ್ರೀಶಿಕ್ಷಣ, ವಿಧವಾ ವಿವಾಹ, ಸಂಪ್ರದಾಯ, ಆಧುಕತೆಯಲ್ಲಿ ಉಂಟಾದ ಸಂಘರ್ಷ, ಮಧ್ಯಮ ಕುಟುಂಬಗಳ ಬದುಕಿನ ಸಂಘರ್ಷ, ಮನುಷ್ಯನ ಅಸ್ತಿತ್ವ, ಅನಾಥ ಪ್ರಜ್ಞೆ, ಯಜಮಾನ್ಯ ಸಂಸ್ಕೃತಿಯ ದರ್ಪದ ವಿರೋಧ, ದಲಿತಪರ ಧ್ವನಿ ಹಾಗೂ ಜಾತ್ಯಾತೀತತೆ ದೃಷ್ಟಿಕೋನ ಮುಂತಾದ ವಿಚಾರಗಳ ಮೂಲಕ ಸಮಾಜವನ್ನು ನೋಡುವ, ಕಟ್ಟುವ ಬಗೆಯನ್ನು ಕಟ್ಟಿಕೊಡುತ್ತವೆ. ಹೀಗೆ ಸಾಹಿತ್ಯ ಕೃತಿಗಳ ಮೂಲಕ ಸಮಾಜ ಗ್ರಹಿಸುವ ಬಗೆಯನ್ನು ಅರ್ಥೈಸಿಕೊಳ್ಳಬಹುದು.

**ಉಪಸಂಹಾರ**

ಇಲ್ಲಿ ಗ್ರಹಿಕೆ ಎಂಬುದನ್ನು ನಾವು ನೋಡುವ ಕ್ರಮ, ತಿಳುವಳಿಕೆ ; ಅಭಿಪ್ರಾಯ, ಪರಸ್ಪರ ಗ್ರಹಿಕೆ, ಅರಿವು, ಮೌಲ್ಯಮಾಪನ ಹಾಗೂ ಕೆಲವು ವಿದ್ಯಮಾನದ ಅವಿಭಾಜ್ಯ ಚಿತ್ರದ ಮನಸ್ಸಿನಲ್ಲಿನ ರಚನೆಗಳೆಂದು ಆರಂಭಿಸಲಾಗಿದೆ. ಆದರೆ ಅದನ್ನು ಅಷ್ಟಕ್ಕೆ ಸೀಮಿತಗೊಳಿಸದೇ ಅದನ್ನು ಮನಶಾಸ್ತ್ರದ ದೃಷ್ಟಿಕೋನದಲ್ಲಿ ನೋಡಲಾಗಿದೆ. ಮುಂದುವರೆದು ವ್ಯಕ್ತಿ ಮತ್ತು ಸಮಾಜದೊಂದಿಗಿನ ಮಾನಸಿಕ ಸಂಬಂಧ, ಸಾಹಿತ್ಯದಲ್ಲಿ ಗ್ರಹಿಕೆಯ ಪಾತ್ರ, ಮಹತ್ವವನ್ನು ಸಾಹಿತಿ ಮತ್ತು ಸಾಹಿತ್ಯ ಕೃತಿಯ ಹಿನ್ನೆಲೆಯಲ್ಲಿ ಚರ್ಚಿಸುವ ಮೂಲಕ ಸಾಹಿತ್ಯ ಮತ್ತು ಗ್ರಹಿಕೆ ಎಂಬುದನ್ನು ಸಂಕ್ಷಿಪ್ತವಾಗಿ ಅರ್ಥೈಸುವ ಪ್ರಯತ್ನ ಮಾಡಲಾಗಿದೆ. ಹಾಗೆ ವ್ಯಕ್ತಿ-ಸಮಾಜ, ಸಾಹಿತಿ-ಸಾಹಿತ್ಯ ವಿಚಾರಗಳನ್ನು ಗ್ರಹಿಕೆ ದೃಷ್ಟಿಕೋನದಲ್ಲಿ ನೋಡಿದೆ. ಇದರ ಮೂಲಕ ವ್ಯಕ್ತಿ ಪ್ರತಿನಿತ್ಯ ಒಂದಿಲ್ಲೊಂದು ರೀತಿಯಲ್ಲಿ ತನ್ನ ಸುತ್ತಲಿನ ಸಾಂಸ್ಕೃತಿಕ ವ್ಯವಸ್ಥೆಯನ್ನು ತನಗೆ ಅರಿವಿರುವಂತೆ, ಅರಿವಿಗೆ ಬಾರದಂತೆಯೂ ಗ್ರಹಿಸಿಕೊಳ್ಳುತ್ತಾನೆ. ಹಾಗೆ ಗ್ರಹಿಸಿಕೊಂಡ ವಿಚಾರಗಳನ್ನು ಕೆಲವು ವ್ಯಕ್ತಿಗಳು(ಸಾಹಿತಿ ಎನ್ನಬಹುದು) ಸಾಹಿತ್ಯದಲ್ಲಿ ಹಿಡಿದಿಡುವ ಪ್ರಯತ್ನ ಮಾಡುತ್ತಾರೆ. ಹೀಗೆ ಹಿಡಿದಿಟ್ಟ, ಹಿಡಿದಿಡುವಂತೆ ಪ್ರೇರೇಪಿಸಿದ ಅನೇಕ ವಿಚಾರ, ಘಟನೆಗಳು ಸಾಹಿತ್ಯ ಮತ್ತು ಗ್ರಹಿಕೆಯ ಸಂಬಂಧವನ್ನು ಬೆಸೆಯುತ್ತವೆ. ಈ ಮೂಲಕ ಸಾಹಿತ್ಯ ಮತ್ತು ಗ್ರಹಿಕೆಯ ಸಂಬಂಧ ಅವಿನಾಭಾವ ಎಂದು ಅಭಿಪ್ರಾಯಿಸಬಹುದು.

**ಕೊನೆ ಟಿಪ್ಪಣಿ.**

[1] **https://kerchtt.ru/kn/percepciya-mehanizmy-i-effekty-osnovnye-svoistva vospriyatiya/**

**ಪರಾಮರ್ಶನ ಗ್ರಂಥಗಳು**


[1] ಸಂಕ್ಷಿಪ್ತ ಕನ್ನಡ ನಿಘಂಟು, ೨೦೧೬, ಕನ್ನಡ ಸಾಹಿತ್ಯ ನಿಘಂಟು, ಚಾಮರಾಜಪೇಟೆ, ಬೆಂಗಳೂರು-೧೮.

[2] ಸಾಂಸ್ಕೃತಿಕ ಪರಿಕಲ್ಪನೆಗಳು, ಕೇಶವಶರ್ಮ ಕೆ., ೨೦೧೪, ದೇಸಿ ಪುಸ್ತಕ, ವಿಜಯನಗರ, ಬೆಂಗಳೂರು – ೫೬೦೦೪೦.

[3] https://kerchtt.ru/kn/percepciya-mehanizmy-i-effekty-osnovnye-svoistva vospriyatiya/